<u>ಸಾಕ್ಷಿಯನ್ನು ದಿನಾಂಕ 18.08.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀಸವಾಲುಃ ಎದುರುದಾರರ ಪರ ಶ್ರೀಮತಿ ಪಿ.ಎಸ್.ಯು. ವಕೀಲರಿಂದಃ-</u>**

ದೂರನ್ನು ಪಡೆದುಕೊಂಡ ನಂತರ ನಾರ್ತ್ ಬೆಂಗಳೂರು ಆಸ್ಪತ್ರೆಗೆ ಹೋಗಿ ತನಿಖೆಯನ್ನು ಮಾಡಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಅರೋಪಿಯೇ ಎರಡು ಲಕ್ಷ ಹಣವನ್ನು ಖರ್ಚು ಮಾಡಿ ಯಾವುದೇ ಎಂಎಲ್ ಸಿ ಅನ್ನು ಮಾಡಿಸಿಲ್ಲ. ಆಪಾದಿತ ವಾಹನವೇ ಅಪಘಾತಪಡಿಸಿರುತ್ತದೆ ಎಂದು ಗಾಯಾಳು ತಿಳಿಸಿರುತ್ತಾರೆ. ಆಪಾದಿತ ವಾಹನದ ಮಾಲೀಕರ ವಿವರವನ್ನು ಪಡೆಯಲು ಆರ್ ಟಿ ಒ ಕಚೇರಿಗೆ ನಾನು ಯೂವುದೇ ನಿವೇದನೆಯನ್ನು ಕೊಟ್ಟಿಲ್ಲ. ಏಕೆಂದರೆ ಎಲ್ಲ ವಿವರಗಳು ಈಗ ಸಿಸ್ಟಮ್ ನಲ್ಲಿ ಸಿಕ್ಕುತ್ತದೆ ಎಂದು ನುಡಿದಿರುತ್ತಾರೆ. ದಿನಾಂಕಃ 19.11.2022ರಂದು ನಾನು ಆಪಾದಿತ ವಾಹನದ ಮಾಲೀಕನಿಗೆ ನೋಟೀಸು ಕೊಟ್ಟೆ. ಅದೇ ದಿನ ಅವರು ಪ್ರತಿ ಉತ್ತರವನ್ನು ಕೊಟ್ಟಿರುತ್ತಾರೆ. ಕಡತದಲ್ಲಿ ಇರುವ ನೋಟೀಸು ಮತ್ತು ಪ್ರತಿ ಉತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇವುಗಳನ್ನು ನಿ.ಆರ್6 ಮತ್ತು 7 ಎಂದು ಗುರುತಿಸಲಾಯಿತು.

4. ದೂರನ್ನು ನೀಡಲು ಆರೋಪಿ ಮತ್ತು ಗಾಯಾಳು ಇಬ್ಬರು ವಾಹನಗಳೊಂದಿಗೆ ಠಾಣೆಗೆ ಬಂದರು. ಆ ಕಾರಣ ನೋಟೀಸು ಕೊಡುವ ಒಂದು ದಿನದ ಪೂರ್ವದಲ್ಲಿಯೇ ವಾಹನವನ್ನು ವಶಪಡಿಸಿಕೊಂಡೆ. ವಾಹನ ಅಮಾನತ್ತು ಮಹಜರನ್ನು ಅವಶ್ಯಕತೆ ಇಲ್ಲದ ಕಾರಣ ಮಾಡಿಲ್ಲ. ಕಲಂ 133 ಎಂವಿ ಕಾಯ್ದೆಯಡಿಯಲ್ಲಿ ನೋಟೀಸು ಮಾಲೀಕನಿಗೆ ಕೊಟ್ಟ ನಂತರವೇ ವಾಹನವನ್ನು ವಶಪಡಿಸಿಕೊಳ್ಳಬೇಕು ಎಂದರೆ ಆ ರೀತಿ ಯಾವುದೇ ನಿಯಮವಿಲ್ಲ. ತನಿಖೆ ಕಾಲದಲ್ಲಿ ಯಾವುದಾದರೂ ಮಾಡಬಹುದು ಎಂದು ನುಡಿದಿರುತ್ತಾರೆ. ಆಪಾದಿತ ವಾಹನದ ಮಾಲೀಕನಿಗೆ ಕಲಂ 133ಎಂವಿ ಕಾಯ್ದೆ ಅಡಿಯಲ್ಲಿ ನೋಟೀಸು ಕೊಡದೇ ಅವರಿಂದ ಪ್ರತಿ ಉತ್ತರವನ್ನು ಪಡೆಯದೆ ಮತ್ತು ವಾಹನವನ್ನು ಅಮಾನತ್ತು ಮಹಜರು ಮಾಡದೆ ಆಪಾದಿತ ವಾಹನವನ್ನು ತಪಾಸಣೆಗೆ ಒಳಪಡಿಸಿದ್ದೇನೆ ಎಂದರೆ ಹೌದು. ವಾಹನದ ಮಾಲೀಕರಿಂದ ಇಂಡೆಮ್ನಿಟಿ ಬಾಂಡನ್ನು ಪಡೆದು ಬಿಡುಗಡೆ ಮಾಡಿರುತ್ತೇನೆ. ಕಡತದಲ್ಲಿ ಇರುವ ಇಂಡೆಮ್ನಿಟಿ ಬಾಂಡನ್ನು ಕೊಟ್ಟಿದ್ದು ಅದಖ್ಖು ನಿ.ಆರ್-8ಎಂದು ಗುರುತಿಸಲಾಯಿತು.

5. ನಾರ್ತ್ ಬೆಂಗಳೂರು ಆಸ್ಪತ್ರೆಯಿಂದ ಮಣಿಪಾಲ್ ಆಸ್ಪತ್ರೆಗೆ ಹೋದಾಗಲೂ ಎಂಎಲ್ ಸಿ ಮಾಡಿರುವುದಿಲ್ಲ. ಮಣಿಪಾಲ್ ಆಸ್ಪತ್ರೆಯು ದಾಖಲೆಯನ್ನು ಚಾರ್ಜ್ ಶೀಟ್ ಹಾಕುವ ಪೂರ್ವದಲ್ಲಿ ನೋಡಿಲ್ಲ. ಯಾವುದೇ ಎಂಎಲ್ ಸಿ ಪ್ರಕರಣಗಳಲ್ಲಿ ಅಂತಿಮ ವರದಿಯನ್ನು ಸಲ್ಲಿಸುವ ಪೂರ್ವದಲ್ಲಿ ಆಸ್ಪತ್ರೆಯಲ್ಲಿ ದಾಖಲಾಗಿರುವಂತಹ ಎಂಎಲ್ ಸಿ ಅನ್ನು ಪರಿಶೀಲಿಸಿ ದಾಖಲು ಮಾಡಬೇಕು ಎಂದರೆ ಹೌದು. ಎಂ ಎಲ್ ಸಿ ದಾಹಲೆಯನ್ನು ನೋಡದೆ ಯಾವ ರೀತಿ ಅಂತಿಮ ವದಿಯನ್ನು ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಗಾಯಾಳು ಹೇಳಿ ಮತ್ತು ಆರೋಪಿಯ ಹೇಳಿಕೆಯನ್ನು ಪಡೆದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ನನ್ನ ಪೂರ್ಣ ತನಿಖೆ ಗಾಯಾಳು ಮತ್ತು ಆರೋಪಿಯ ಹೇಳಿಕೆಯ ಮೇಲೆ

ಅವಲಂಬಿತವಾಗಿರುವುದು ಎಂದರೆ ಹೌದು. ಈ ಪ್ರಕರಣದಲ್ಲಿ ಆರೋಪಿ ಮತ್ತು ಗಾಯಾಳು ನಮ್ಮ ಠಾಣೆಗೆ ವಾಹನಗಳ ಸಮೇತ ಜೊತೆಗೆ ಅಪಘಾತವಾದ 16ದಿನಗಳ ನಂತರ ಬಂದು ಪ್ರಕರಣ ದಾಖಲು ಮಾಡಿ ಎಂದು ಹೇಳಿದ ಕಾರಣ ನಾನು ಯಾವುದೇ ತನಿಖೆಯನ್ನು ಮಾಡದೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

6. ಆಪಾದಿತ ವಾಹನವನ್ನು ನಾನು ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ಅದಕ್ಕೆ ಯೂವುದೇ ಜಖಂ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಪಾದಿತ ವಾಹನದ ಮಾಲೀಕ, ಗಾಯಾಳು ಎಲ್ಲರೂ ಒಬ್ಬರಿಗೊಬ್ಬರು ಶಾಮೀಲಾಗಿ ನೋಟೀಸು ಮತ್ತು ಪ್ರತಿ ಉತ್ತರದ ನೋಟೀಸನ್ನು ಕೊಡದೆ ಮತ್ತು ಪಡೆಯದೆ ವಾಹವನನ್ನು ಅಮಾನತ್ತು ಪಡಿಸಿಕೊಳ್ಳದೆ ವಾಹನವನ್ನು ತಪಾಸಣೆಗೆ ಒಳಪಡಿಸಿದ್ದೇನೆ ಎಂದರೆ ಸರಿಯಲ್ಲ, ಇದು ರಸ್ತೆ ಅಪಘಾತದ ಪ್ರಕರಣ ಅಲ್ಲ. ಗಾಯಾಳುವಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಒಂದನೇ ಎದುರುದಾರರ ಪರ ವಕೀಲರಿಂದಃ-**

ದೂರು ಕೊಡುವ ಸಂದರ್ಭದಲ್ಲಿ ಗಾಯಾಳು ಜೊತೆಯಲ್ಲಿ ಆರೋಪಿ ಠಾಣೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದೂರು ಕೊಡುವ ಸಂದರ್ಭದಲ್ಲಿ ಆರೋಪಿ ಠಾಣೆಗೆ ಬಂದಿದ್ದರು ಎಂದು ಯಾವುದೇ ಹೇಳಿಕೆ ಪಡೆದಿಲ್ಲ. ಆರೋಪಿ ಗಾಯಾಳುವಿನೊಂದಿಗೆ ಠಾಣೆಗೆ ಬರದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ದಿನಾಂಕವೇ ನಮ್ಮ ಠಾಣೆಗೆ ಅಪಘಾತದ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ. ವೈದ್ಯಕೀಯದ ದಾಖಲೆಗಳಲ್ಲಿ ಹೆಣ್ಣೂರು ಫ್ಲೈ ಓವರ್ ಮೇಲೆ ಅಪಘಾತವಾಗಿದೆ ಎಂದು ತಿಳಿಸಿದ್ದು ಇದರ ಬಗ್ಗೆ ತನಿಖೆಯುನ್ನು ಮಾಡಿದ್ದೀರಾ ಎಂಬ ಪ್ರಶ್ನೆಗೆ ವೈದ್ಯರಿಗೆ ಆರೋಪಿಯು ತಪ್ಪು ಮಾಹಿತಿ ಕೊಟ್ಟು ಹೊರಮಾವು ಅಂಡರ್ ಪಾಸ್ ನಲ್ಲಿ ಅಪಘಾತವಾಗಿದ್ದರೂ ಹೆಣ್ಣೂರು ಫ್ಲೈ ಓವರ್ ಮೇಲೆ ಅಪಘಾತವಾಗಿದೆ ಎಂದು ತಪ್ಪು ಮಾಹಿತಿಯನ್ನು ವೈದ್ಯರಿಗೆ ತಿಳಿಸಿರುತ್ತಾರೆ. ಅವರಿಂದ ಯಾವುದೇ ಲಿಖಿತವಾಗಿ ಹೇಳಿಕೆ ಪಡೆದಿಲ್ಲ, ಮೌಖಿಕವಾಗಿ ಪಡೆದೆ. ಯಾವುದೇ ಲಿಖಿತ ಹೆಳಿಕೆಗಳಿಲ್ಲದೆ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ಒಬ್ಬರ ಮೇಲೆ ಆಪಾದನೆ ಮಾಡುವುದು ತಪ್ಪಲ್ಲವಾ ಎಂಬ ಪ್ರಶ್ನೆಗೆ ನಾನು ಯಾವುದೇ ಆಪಾದನೆ ಮಾಡುತ್ತಿಲ್ಲ, ಗಾಯಾಳು ಸಹ ಹೇಳಿರುತ್ತಾರೆ. ನಾನು ಗಾಯಾಳುವಿಗೆ ಪರಿಹಾರ ಕೊಡಿಸುವ ಸಲುವಾಗಿ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

*2.* ಆಪಾದಿತ ವಾಹನವನ್ನು ನಾನು ಅಮಾನತ್ತು ಪಡಿಸಿಕೊಂಡಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ. *8* ಇಂಡೆಮ್ನಿಟಿ ಬಾಂಡನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಪಾದಿತ ವಾಹನವು ಅಪಘಾತದಲ್ಲಿ ಭಾಗಿಯಾಗದಿದ್ದರೂ ಸಹ ನಾನು ಸದರಿ ವಾಹನದ ಮೇಲೆ ಸುಳ್ಳು ಆಪಾದನೆ ಮಾಡಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸಹಾಯ ಮಾಡುವ ಉದ್ದೇಶದಿಂದ ಸಾಲವಾಗಿ ರೂ.*2,00,000/-* ಹಣವನ್ನು ಆಸ್ಪತ್ರೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಮುಂದುವರೆದು ತಪ್ಪು

ಮಾಡಿರುವುದರಿಂದ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಗಾಯಾಳುವಿನ ತಂದೆ ಮತ್ತು ಆಪಾದಿತ ವಾಹನದ ಮಾಲೀಕರು ಇಬ್ಬರು ಪರಿಚಯಸ್ಥರು, ಆ ಕಾರಣ ಎರಡು ಲಕ್ಷ ಹಣ ಸಾಲ ಕೊಟ್ಟಿರುತ್ತಾರೆ ಎಂದರ ಸರಿಯಲ್ಲ. ಆರೋಪಿಗೂ ಮತ್ತು ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**

**ನ್ಯಾಯಾಧೀಶರು, ಬೆಂಗಳೂರು.**